ವಿಸ್ತರಣೆ ಮಾಡುತ್ತೀರಾ ? ಇವರಿಗೆ ನೀವು ಅನುಕೂಲ ಮಾಡಿಕೊಡುತ್ತೀರಾ ಎಂದು, ಇದರ ಬಗ್ಗೆ ನೀವು ಕ್ಲಾರಿಫಿಕೇಶನ್ ಕೊಟ್ಟರೆ ಸಾಕಾಗುತ್ತದೆ.

ಶ್ರೀ ಧರ್ಮಸಿಂಗ್.—ಈ ಅಕ್ರಮ ಸಾಗುವಳಿ ಮಾಡುತ್ತಿರುವ ಜಮೀನನ್ನು ಸಕ್ರಮಗೊಳಿಸುವ ಬಗ್ಗೆ ಈಗಾಗಲೇ ನಾವು ೧೩೦ ಸರ್ವೆಯರ್‌ಗಳನ್ನು ಭರ್ತಿ ಮಾಡತಕ್ಕಂಥ ಪ್ರಯತ್ನವನ್ನು ಮಾಡಿದ್ದೇವೆ. ಇನ್ನೂ ಹೆಚ್ಚು ಜನರುಗಳು ಬೇಕು ಎಂದರೆ, ಅದನ್ನು ಕೂಡ ನಾವು ಪರಿಶೀಲನೆ ಮಾಡುತ್ತೇವೆ. ಎರಡನೆಯದು, ಅವಧಿಯನ್ನು ವಿಸ್ತರಿಸುವ ಬಗ್ಗೆ ಕೇಳಿದ್ದಾರೆ. ಈಗಾಗಲೇ ೧೦ ಲಕ್ಷ ೮೬ ಸಾವಿರ ಅರ್ಜಿಗಳು ಬಂದಿವೆ. ಮುಂದೆ ಇದನ್ನು ಎಕ್ಸ್‌ಟೆನ್‌ಶನ್ ಮಾಡಬೇಕೇ ಬೇಡವೇ ಎನ್ನುವುದರ ಬಗ್ಗೆ ಕೂಡ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಏಕೆಂದರೆ ಅನೇಕ ಕಡೆ ಶಾಸಕರು ಮನವಿ ಸಲ್ಲಿಸಿದ್ದಾರೆ. ಇದನ್ನು ಕೂಡ ವಿಚಾರ ಮಾಡೋಣ. ಸಿ. ಅಂಡ್ ಡಿ. ಲ್ಯಾಂಡ್ ಬಗ್ಗೆ ಸೆಂಟ್ರಲ್ ಆಕ್ಟ್ ಅಡ್ಡಬರುತ್ತದೆ ಎನ್ನುವುದಿದೆ, ಅದರ ಬಗ್ಗೆ ಕೂಡ ಸಮಾಲೋಚನೆ ಮಾಡಿ ಕ್ರಮ ತೆಗೆದುಕೊಳ್ಳೋಣ. ಒಟ್ಟಾರೆ ಹೇಳಬೇಕಾದರೆ, ಕರ್ನಾಟಕ ರಾಜ್ಯದಲ್ಲಿ ಅಕ್ರಮ ಸಾಗುವಳಿ ಮಾಡುತ್ತಿರುವ ೧೦ ಲಕ್ಷ ೮೬ ಸಾವಿರ ಜನ ಏನಿದ್ದಾರೆ, ಇದನ್ನು ಸಕ್ರಮಗೊಳಿಸುವ ಕೆಲಸವನ್ನು ಬಹಳ ತೀವ್ರಗತಿಯಲ್ಲಿ ಏನು ವ್ಯವಸ್ಥಿತವಾಗಿ ಸರ್ಕಾರ ಮಾಡಬೇಕಾಗಿದೆ ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಈ ಅವಧಿಯನ್ನು ವಿಸ್ತರಣೆ ಮಾಡಬೇಕು. ಅರಣ್ಯ ಇಲಾಖೆಯ ಜಮೀನನ್ನು ಸಾಗುವಳಿ ಮಾಡುವುದಕ್ಕೆ ಸಕ್ರಮ ಮಾಡುವುದರ ಬಗ್ಗೆ ನೀವು ಕಾರ್ಯಕ್ರಮವನ್ನು ರೂಪಿಸಬೇಕು. ಇದರ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಸರ್ಕಾರಕ್ಕೆ ಇದರ ಬಗ್ಗೆ ಕಳಕಳಿ ಇಲ್ಲವೆಂದು ಹೇಳಿ ಪ್ರತಿಭಟನೆ ಮಾಡಿ ನಾವು ಹೊರಗೆ ಹೋಗ್ಬೇಕಾಗುತ್ತದೆ.

ಶ್ರೀ ಧರ್ಮಸಿಂಗ್,—ಯಡಿಯೂರಪ್ಪನವರೇ, ಇದು ಒಹಳ ದಿವಸವಿಂದ ಇದೆ. ಇದು ಸರ್ಕಾರದ ಕಾರ್ಯಕ್ರಮ. ಇದು ಒಂದೇ ದಿವಸದಲ್ಲಿ ಪ್ರಾರಂಭವಾದ ಕಾರ್ಯಕ್ರಮ ಅಲ್ಲ. ಇದು ಆರು ತಿಂಗಳ ಹಿಂದೆ ಪ್ರಾರಂಭವಾದುದಲ್ಲ. ಬಹಳ ವರ್ಷಗಳಿಂದ ನಡೆಯುತ್ತಿದೆ. ಇದರ ಬಗ್ಗೆ ಮೊದಲೇ ಏಕೆ ಅಗಲಿಲ್ಲವೆಂದು ಹೇಳಿದರೆ, ಈಗ ಸರ್ಕಾರ ಕಾಳಜಿ ವಹಿಸಿದೆ. ಮಾನ್ಯ ವೆಂಕಟಪ್ಪ ಅವರು ತಹಶೀಲ್ದಾರರಿಗೆ ಜೀಪುಗಳು ಇಲ್ಲವೆಂದು ಹೇಳಿದ್ದಾರೆ. ಈಗ ನಾವು ೪೨ ಜೀಪುಗಳನ್ನು ತಹಶೀಲ್ದಾರುಗಳಿಗೆ ಒದಗಿಸಿಕೊಟ್ಟಿದ್ದೇವೆ.

ಅಧ್ಯಕ್ಷರು.—ಈಗ ಶೂನ್ಯವೇಳೆ ಮುಕ್ತಾಯವಾಯಿತು, ಇನ್ನು ವಿತ್ತೀಯ ಕಾರ್ಯಕಲಾಪಗಳು. ಶ್ರೀ ಕಾಗೋಡು ತಿಮ್ಮಪ್ಪನವರು ಮಾತನಾಡಬೇಕು.

ಶ್ರೀ ಬಸವರಾಜರಾಯರೆಡ್ಡಿ.—ಗ್ರಾಮ ಪಂಚಾಯತಿ ಚುನಾವಣೆ ವಿಷಯದಲ್ಲಿ ಕೊಲೆ ಬೆದರಿಕೆ ಯನ್ನು ಹಾಕಿದ್ದಾರೆ. ಆ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನನಗೆ ಅನುಮತಿ ಕೊಡಬೇಕು.

ಅಧ್ಯಕ್ಷರು.—ನಾನು ಮೆನ್ಷೆ ಮಾಡಿದ್ದೇನೆ. ನಿಮ್ಮ ಪತ್ರ ನನಗೆ ಬಂದಿಲ್ಲ. ಈಗ ವಿತ್ತೀಯ ಕಾರ್ಯಕಲಾಪಗಳು. ಕಾಗೋಡು ತಿಮ್ಮಪ್ಪನವರು ಮಾತನಾಡಬೇಕು.

ಶ್ರೀ ಬಸವರಾಜರಾಯರೆಡ್ಡಿ.—ಚುನಾವಣೆ ಹೇಗೆ ನಡೆದಿದೆ ಎನ್ನುವುದಕ್ಕೆ ರಾಜ್ಯದ ಮುಖ್ಯ ಚುನಾವಣಾಧಿಕಾರಿಗಳು...ನನಗೆ ತಾವು ಅನುಮತಿಯನ್ನು ಕೊಡಲೇಬೇಕು. ತಾವು ದ್ವಿಮುಖ ನೀತಿಯನ್ನು ಅನುಸರಿಸಬಾರದು ಅಂತ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಪತ್ರವನ್ನು ಕಳಿಸಿಲ್ಲ. ಆದ್ದರಿಂದ ಅದಕ್ಕೆ ಅನುಮತಿಯನ್ನು ಕೊಡುವುದಿಲ್ಲ.

ಶ್ರೀ ಬಸವರಾಜರಾಯರೆಡ್ಡಿ.—ತಾವು ಅನುಮತಿಯನ್ನು ನನಗೆ ಕೊಡಬೇಕು. ಕೊಲೆಯು ಬೆದರಿಕೆಯಾಗಿದೆ....

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಸಭಾಧ್ಯಕ್ಷರ ಪೀಠದ ಸಮೀಪಕ್ಕೆ ಹೋಗಿ ಒತ್ತಾಯ ಮಾಡತೊಡಗಿದರು)

ಅಧ್ಯಕ್ಷರು.—ತಾವು ತಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಬೇಕು. ನಾನು ಅನುಮತಿ ಕೊಡುವುದಕ್ಕೆ ಆಗುವುದಿಲ್ಲ. ನಾನು ರೂಲಿಂಗನ್ನು ಕೊಟ್ಟಿದ್ದೇನೆ. ತಾವು ದಯಮಾಡಿ ತಮ್ಮ ಸ್ಥಳದಲ್ಲಿ ಹೋಗಿ ಕುಳಿತುಕೊಳ್ಳಬೇಕು.

ಶ್ರೀ ಬಸವರಾಜರಾಯರೆಡ್ಡಿ.—ತಾವು ಬೇರೆ ಸದಸ್ಯರಿಗೆ ಅವಕಾಶವನ್ನು ಕೊಟ್ಟಿರುವಂತೆ ನನಗೂ ಕೊಡಬೇಕು.

ಅಧ್ಯಕ್ಷರು.—ಕೊಟ್ಟಿಲ್ಲ. ಅವರು ಬಂದು ಕೇಳಿಕೊಂಡಿದ್ದಕ್ಕೆ ಕೊಟ್ಟಿದ್ದೇನೆ; ನಾನು ಹೇಳುತ್ತಿದ್ದೇನೆ, ತಾವು ಪತ್ರವನ್ನು ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು.—ತಾವು ತಮ್ಮ ಸ್ಥಳದಲ್ಲಿ ಹೋಗಿ ಕುಳಿತುಕೊಳ್ಳಿ;

ಶ್ರೀ ಬಸವರಾಜರಾಯರೆಡ್ಡಿ.—ಚುನಾವಣಾ ಅಧಿಕಾರಿಗೆ ಕೊಲೆ ಬೆದರಿಕೆ ಹಾಕುತ್ತಾರೆ.....

(ಗೊಂದಲ)

ಅಧ್ಯಕ್ಷರು.—ಕಾಗೋಡು ತಿಮ್ಮಪ್ಪನವರೇ, ತಾವು ಮಾತನಾಡಿ;

ಶ್ರೀ ಬಸವರಾಜರಾಯರೆಡ್ಡಿ.—ತಾವು ದಯವಿಟ್ಟು ಅನುಮತಿಯನ್ನು ಕೊಡಬೇಕು;

ಅಧ್ಯಕ್ಷರು.—ಕೊಡುವುದಿಲ್ಲ. ತಾವು ಸ್ಥಳದಲ್ಲಿ ಹೋಗಿ ಕುಳಿತುಕೊಳ್ಳಬೇಕು;

ಶ್ರೀ ಬಸವರಾಜರಾಯರೆಡ್ಡಿ.—ಅವರಿಗೆ ಅವಕಾಶ ಕೊಟ್ಟಿದ್ದೀರಿ;

ಅಧ್ಯಕ್ಷರು.—ಆ ಪ್ರಶ್ನೆಯನ್ನು ನೀವು ಕೇಳತಕ್ಕದ್ದಲ್ಲ. ಅದನ್ನು ಕೇಳುವ ಹಕ್ಕು ನಿಮಗಿಲ್ಲ. ಅವರು ಬೆಳಿಗ್ಗೆ ನನ್ನ ಹತ್ತಿರ ಬಂದು ಬರೆದುಕೊಟ್ಟಿದ್ದಾರೆ. ತಾವು ಬರೆದು ಕೊಟ್ಟಿಲ್ಲ.

ಶ್ರೀ ಬಸವರಾಜರಾಯರೆಡ್ಡಿ.—ನಾನು ಬೆಳಿಗ್ಗೆ ಒಂಭತ್ತೂವರೆ ಗಂಟೆಗೆ ಕಾರ್ಯದರ್ಶಿ ಅವರಿಗೆ ಬರೆದುಕೊಟ್ಟು ಹೋಗಿದ್ದೇನೆ. ಕೇಳಿ ಅವರಿಗೆ ತಾವು ಇರಲಿಲ್ಲ, ನಾನು ಅವರಿಗೆ ಕೊಟ್ಟು ಹೋಗಿದ್ದೇನೆ.

ಅಧ್ಯಕ್ಷರು.—ಇಲ್ಲ ಬಂದಿಲ್ಲ, ಇದಕ್ಕಿಂತ ಅಧಿಕೃತವಾಗಿ ನಿಮಗೆ ಇನ್ನೇನು ಬೇಕು ? ತಾವು ತಮ್ಮ ಸ್ಥಳಕ್ಕೆ ಹೋಗಬೇಕು. ತಾವು ತಮ್ಮ ಸ್ಥಳಕ್ಕೆ ಹೋಗಿ ಮಾತನಾಡಬೇಕು. ತಾವು ತಮ್ಮ ಸ್ಥಳಕ್ಕೆ ಹೋಗಲೇಬೇಕು. ನಾನು ಈಗ ವಿತ್ತೀಯ ಕಾರ್ಯಕಲಾಪ ತೆಗೆದುಕೊಳ್ಳುತ್ತಿದ್ದೇನೆ. ಅದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಸವರಾಜರಾಯರೆಡ್ಡಿಯವರು ಅಧ್ಯಕ್ಷ ಪೀಠದ ಹತ್ತಿರ ಹೋಗಿ ನಿಂತು ಮಾತನಾಡುತ್ತಿದ್ದರು)

(ಗೊಂದಲ)

ಅಧ್ಯಕ್ಷರು.—ಶ್ರೀ ಬಸವರಾಜರಾಯರೆಡ್ಡಿಯವರು ಸದನದ ಕಾರ್ಯಕಲಾಪಗಳಿಗೆ ಪದೇ ಪದೇ ಅಡ್ಡಿ ಪಡಿಸುತ್ತಿರುವುದರಿಂದ ನಾನು ರೂಲ್ಸ್ ಪ್ರಕಾರ ಕ್ರಮ ಜರಿಗೆದುಕೊಳ್ಳಬೇಕಾಗುತ್ತದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ. (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಬಸವರಾಜರಾಯರೆಡ್ಡಿಯವರು ಸದನದ ಕಾರ್ಯಕಲಾಪಗಳಿಗೆ ಅಡ್ಡಿಪಡಿಸುತ್ತಿರುವುದರಿಂದ ಅವರನ್ನು ಈ ಅಧಿವೇಶನ ಮುಗಿಯುವವರೆಗೂ ಸಭೆಯಿಂದ ಹೊರಗೆ ಹಾಕಬೇಕೆಂದು ನಾನು ನಿರ್ಣಯವನ್ನು ಮಂಡಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವನೆಯನ್ನು ನಾನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ, ಮಾನ್ಯ ಸದಸ್ಯರಾದ ಶ್ರೀ ಬಸವರಾಜರಾಯರೆಡ್ಡಿ ಅವರು ಸದನದ ಕಾರ್ಯಕಲಾಪಗಳಿಗೆ ಅಡ್ಡಿ ಪಡಿಸುತ್ತಿರುವುದರಿಂದ ಅವರನ್ನು ಈ ಅಧಿವೇಶನ ಮುಗಿಯುವವರೆವಿಗೂ ಸಭೆಯಿಂದ ಹೊರ ಹಾಕಬೇಕೆಂದು ಸೂಚಿಸಿರುವ ನಿರ್ಣಯವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

(ನಿರ್ಣಯ ಅಂಗೀಕಾರವಾಯಿತು)

ಶ್ರೀ ಬಸವರಾಜರಾಯರೆಡ್ಡಿ.—ಮಾನ್ಯ ಅಧ್ಯಕ್ಷರೇ ಇದು ಸರಿಯಲ್ಲ. ತಾವು ಈ ತರಹದ ನಿರ್ಣಯವನ್ನು ತೆಗೆದುಕೊಳ್ಳಬಾರದಿತ್ತು. ಮುಖ್ಯ ಚುನಾವಣಾಧಿಕಾರಿಗಳು ಗ್ರಾಮೀಣ ಅಭಿವೃದ್ಧಿ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದಾರೆ. ಕೊಲೆ ಬೆದರಿಕೆ ಹಾಕಿ.....

ಶ್ರೀ ಎ.ಕೆ. ಆನಂತಕೃಷ್ಣ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪವಿದೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ, ಕಾಗೋಡು ತಿಮ್ಮಪ್ಪನವರೇ ತಾವು ಮಾತನಾಡಿ.

(ಗೊಂದಲ)

ಅಧ್ಯಕ್ಷರು.—ತಾವು ಅವರನ್ನು ಹೊರಗೆ ಹಾಕಿ.

ಶ್ರೀ ಎ.ಕೆ. ಆನಂತಕೃಷ್ಣ.—ತಾವು ಅವರನ್ನು ಹೊರಗೆ ಹಾಕಿ ಎಂದು ಹೇಳಿದ ಮೇಲೆ ಸಹ ಅವರು ಮಾತನಾಡುತ್ತಿರುವುದು ಕಡತಕ್ಕೆ ಹೋಗುತ್ತಿದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಕಾಗೋಡುತಿಮ್ಮಪ್ಪನವರೇ, ತಾವು ಭಾಷಣ ಶುರು ಮಾಡಬೇಕು. ಮಾನ್ಯ ಬಸವರಾಜರಾಯರೆಡ್ಡಿ ಅವರು ಸಭೆಯಿಂದ ಹೊರಗೆ ಹೋಗಬೇಕು. ನಾನು ಓಟಿಂಗ್ ತೆಗೆದುಕೊಂಡಿದ್ದೇನೆ, ಬಹುಮತದಿಂದ ಮಾನ್ಯ ಸದಸ್ಯರು ಒಪ್ಪಿದ್ದಾರೆ. ಆದ್ದರಿಂದ ದಯವಿಟ್ಟು ತಾವು ಸದನದಿಂದ ಹೊರಗೆ ಹೋಗಬೇಕು.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಸವರಾಜರಾಯರೆಡ್ಡಿಯವರನ್ನು ಅನಾಮತ್ತಾಗಿ ಎತ್ತಿ ಹೊರಗೆ ಹಾಕಲಾಯಿತು)

(ಗೊಂದಲ)

† ಶ್ರೀ ಕೆ. ಎಚ್. ರಂಗನಾಥ್ (ಲೋಕೋಪಯೋಗಿ ಸಚಿವರು).—ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ಒಂದು ವಿಷಯ ಪ್ರಸ್ತಾಪ ಮಾಡುವುದಕ್ಕೆ ನಿಂತಿದ್ದೇನೆ. ಇವತ್ತು ಈಗ ತಾವು ಏನೋ ಒಂದು ತೀರ್ಮಾನ ತೆಗೆದುಕೊಂಡಿರಿ ಸದನ ಆದಕ್ಕೆ ಒಪ್ಪಿಗೆ ಕೊಟ್ಟಿತು. ನಮ್ಮಲ್ಲಿ ಯಾರಾದರೂ ಉದ್ವೇಗಕ್ಕೆ ಒಳಗಾಗುಹುದು. ನಾವು ರೂಲ್ಸ್ ಪ್ರಕಾರ ಕೆಲಸ ಮಾಡದೇ ಹೋದರೆ ತಪ್ಪಾಗುತ್ತದೆ. ಮಾನ್ಯ ಸದಸ್ಯರು ತಮ್ಮ ಜಾಗದಲ್ಲೇ ನಿಂತುಕೊಂಡು ಪ್ರಸ್ತಾಪ ಮಾಡಿದ್ದರೆ ಆ ಮಾತು ಬೇರೆ. ಇವತ್ತು ಇಲ್ಲಿ ನಡೆದಂತಹ ಘಟನೆಯಲ್ಲಿ ಎರಡು ಮೂರು ವಿಚಾರಗಳಿವೆ. ಒಂದು ನಾವು ಬರೆದು ಕೊಟ್ಟಿರ ಬಹುದು. ಒಂದು ವೇಳೆ ತಪ್ಪಾಗಿ ಅದು ಇಲ್ಲಿ ಸೇರದೇ ಇರಬಹುದು. ಅಧ್ಯಕ್ಷರು ಇದು ಬಂದಿಲ್ಲ, ನಾನು ಪೆಂಛೈ ಮಾಡಿದ್ದೇನೆಂದು ಹೇಳಿದಾಗ ಇದು ಅಲ್ಲಿಗೆ ನಿಂತು ಹೋಗಬೇಕಾಯಿತು. ಆದರೆ ಮಾನ್ಯ ಸದಸ್ಯರು ನಾನು ಕೊಟ್ಟಿದ್ದೇನೆ ಹಾಗೆ ಅಂತ ಹೇಳಿ ತಮ್ಮ ಆಸನದ ಹತ್ತಿರ ಬರತಕ್ಕಂಥಾದ್ದು ಏನು ಇದೆ, ಆ ಪ್ರವೃತ್ತಿ ಸರಿಯಾದ ತಹ ಪ್ರವೃತ್ತಿ ಅಲ್ಲ. ಅದಕ್ಕೆ ತಾವು ಒಂದು ಕಠಿಣವಾದಂಥ ನಿಲುವು ತಾಳಲೇಬೇಕಾಗುತ್ತದೆ. ಈ ಸದನ ಕೂಡ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಮತ್ತೆ ಆಯಿತು. ನಾವು ಏನೋ ಪ್ರತಿಭಟನ ಮಾಡುತ್ತೇವೆ, ನಾವು ಇಲ್ಲಿ ಬಾವಿಗೆ ಬರುತ್ತೇವೆ, ಇಲ್ಲಿ ಬಂದ ಮೇಲೆ ನಾವು ಮಾತನಾಡತಕ್ಕಂಥಾದ್ದನ್ನು ನಿಲ್ಲಿಸಬೇಕಾಗುತ್ತದೆ. ಇಲ್ಲಿ ಬರುವುದು ತಿರುಗಿ ಹೋಗುವುದು ಅಥವಾ ಇಲ್ಲಿಯೇ ನಿಂತು ಮಾತನಾಡುವುದು, ಈ ರೀತಿ ಆದರೆ ಅಧ್ಯಕ್ಷರಿಗೆ ಬಹಳ ತೊಂದರೆ ಕೊಟ್ಟಂತೆ ಆಗುತ್ತದೆ. ನಮ್ಮ ರೂಲ್ಸ್‌ಪ್ರಕಾರ ನಾವು ಎಲ್ಲಾ ರೀತಿಯ ಸಹಕಾರವನ್ನು ನಮಗೆ ಕೊಡತಕ್ಕಂಥಾದ್ದು ನಮ್ಮ ಕರ್ತವ್ಯ ಆಗಿದೆ. ಈ ಸದನದ ಸದಸ್ಯರಾಗಿ ನಮ್ಮ ಕರ್ತವ್ಯ ಏನು ಅಂತ ಹೇಳಿದರೆ, ನಮ್ಮ ಎಲ್ಲಾ ರೀತಿಯ ಸಹಕಾರವನ್ನು ತಮಗೆ ಕೊಡುವುದು. ನಮ್ಮ ಹಿತವನ್ನು ಕೂಡ ತಾವು ರಕ್ಷಣೆ ಮಾಡಬೇಕಾಗುತ್ತದೆ. ಇದು ಕಾನೂನಿನಲ್ಲಿ ಮೂಲಭೂತವಾಗಿ ಇರತಕ್ಕಂಥಾದ್ದು. ಏನೋ ಒಂದು ಭಾರಿ ಕಾರಣಾಂತರದಿಂದ ಉದ್ವೇಗ ಬಂದು ಈ ರೀತಿ ಆಯಿತು ಅಂದರೆ ಆಮಾತು ಬೇರೆ. ಆದರೆ ಪ್ರತಿ ದಿವಸ ಪದೇ ಪದೇ ಈ ತರಹ ಆದರೆ ಬುದ್ಧಿಪೂರ್ವಕವಾಗಿ ನಾವು ಇದನ್ನು

† ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡಲು ಪ್ರಯತ್ನ ಪಟ್ಟರೆ ಅದು ದೊಡ್ಡ ಅಪರಾಧವಾಗುತ್ತದೆ. ಈ ದೃಷ್ಟಿಯಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಅದು ಯಾರೇ ಆಗಲಿ ನಾವು ಈ ಪಕ್ಷದವರು ಆಗಲಿ, ಆ ಪಕ್ಷದವರು ಆಗಲಿ ರಾಜ್ಯಾಂಗದಲ್ಲಿ ಈ ಪಕ್ಷ ಆ ಪಕ್ಷ ಅಂತ ಇಲ್ಲ. ಹೌಸ್ ಅಂತಲೇ ಹೇಳಿರತಕ್ಕಂಥಾದ್ದು. ನಮ್ಮ ರೂಲ್ಸ್ ಆಫ್ ಪ್ರೊಸಿಜರ್‌ನಲ್ಲಿ ಕೂಡ ನಾವು ಹೌಸ್ ಅಂತಲೇ ಹೇಳಿರತಕ್ಕಂಥಾದ್ದು. ಆದಕಾರಣ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ I was really purturbed. ಇವರು ಅಲ್ಲಿಯವರೆಗೂ ಬರುತ್ತಾ ಇದ್ದಾರೆಂದು ಹೇಳಿದರೆ ವಿಕಾರ ಮನಸ್ಸು ಏನು ಬೇಕಾದರೂ ಮಾಡಬಹುದು, ಹಾಗೆ ಮಾಡಿದಾಗ ತಾವು ಏನೂ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ. ತಾವು ಸುಮ್ಮನೆ ನಿಸ್ಸಾಯಿಕರಾಗಿ ಕುಳಿತುಕೊಳ್ಳತಕ್ಕಂಥ ಪರಿಸ್ಥಿತಿ ಆಗುತ್ತದೆ. ಆದ್ದರಿಂದ ನನ್ನ ವಿನಂತಿ ಏನೆಂದರೆ ಇದಕ್ಕೆ ತಾವು ಒಂದು ಸ್ಪಷ್ಟ ರೂಲಿಂಗ್ ಕೊಡಬೇಕು. ನಾವು ನಮ್ಮ ಜಾಗದಲ್ಲಿ ಪ್ರತಿಭಟನೆ ಮಾಡ ತಕ್ಕಂಥಾದ್ದು ಸರಿ. ಆದು ಬಿಟ್ಟು ಬಾವಿಗೆ ಬಂದು ಧರಣಿ ಮಾಡುವುದು. ಅಲ್ಲಿಂದಲೇ ಮಾತ ನಾಡುವುದು ಇಲ್ಲಿ ಪದೇ ಪದೇ ನಡೆಯುತ್ತಿದೆ. ಈ ದೃಷ್ಟಿಯಿಂದ ತಾವು ಇದನ್ನೆಲ್ಲಾ ಯೋಚಿಸಿ ಸಮಗ್ರವಾದ ಒಂದು ತೀರ್ಮಾನವನ್ನು ಕೊಡಲೇಬೇಕು ಹಾಗೆ ಅಂತ ಹೇಳಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ,

ಅಧ್ಯಕ್ಷರು.—ಮಾನ್ಯ ಕಾಗೋಡು ತಿಮ್ಮಪ್ಪನವರು.

ವಿತ್ತೀಯ ಕಾರ್ಯಕಲಾಪಗಳು

೧೯೯೪–೯೫ನೇ ಸಾಲಿನ ಆಯವ್ಯಯದ ಮೇಲಿನ ಮುಂದುವರೆದ ಚರ್ಚೆ

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ ನಿನ್ನೆ ನಾನು ಮಾತನಾಡತಕ್ಕಂಥ ಕಾಲದಲ್ಲಿ ಹಿಂದುಳಿದ ವರ್ಗದವರ ಅಭಿವೃದ್ಧಿಗೋಸ್ಕರವಾಗಿ ಒಂದು ವ್ಯಾಪಕವಾದಂಥ ಕಾರ್ಯಕ್ರಮ ವನ್ನು ಸರ್ಕಾರ ರೂಪಿಸಬೇಕು ಈಗ ಒದಗಿಸಿರತಕ್ಕಂಥ ಹಣ ಸಾಕಾಗುವುದಿಲ್ಲ ಏಕೆಂದರೆ ಆ ವರ್ಗದ ಜನರ ಅಭ್ಯುದಯ ಜವಾಬ್ದಾರಿಯನ್ನು ಸರ್ಕಾರ ಹೊತ್ತಿದೆ. ಆ ದೃಷ್ಟಿಯಿಂದ ಆ ಜವಾಬ್ದಾರಿಯನ್ನು ನಿರ್ವಹಿಸಬೇಕಾದರೆ ಒಂದು ಹೆಚ್ಚಿನ ಹಣ ಕೊಟ್ಟು ವ್ಯಾಪಕವಾಗಂತಹ ಕಾರ್ಯಕ್ರಮವನ್ನು ಹಾಕಿ ಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಪಡಿಸುತ್ತೇನೆ. ಅದೇ ಕಾಲಕ್ಕೆ ಅಲ್ಪಸಂಖ್ಯಾತರ ಆರ್ಥಿಕ ಸಮೀಕ್ಷೆ ಮಾಡತಕ್ಕಂಥ ಒಂದು ತೀರ್ಮಾನವನ್ನು ಸರ್ಕಾರ ಮಾಡಿರತಕ್ಕಂಥಾದ್ದು ತುಂಬಾ ಸ್ವಾಗತಾರ್ಹವಾದಂತಹ ವಿಚಾರ ಆದಷ್ಟು ಬೇಗ ಆ ವರದಿಯನ್ನು ಜಾರಿಗೆ ತಂದು ಈ ಹರ್ಷದ ಪ್ರಾರಂಭದಲ್ಲಿಯೇ ಒಂದು ಆರ್ಥಿಕ ಅಭಿವೃದ್ಧಿಯ ಕಾರ್ಯಕ್ರಮ ಅಲ್ಪಸಂಖ್ಯಾತರಿಗೆ ಪ್ರಾರಂಭ ಆಗಬೇಕು, ಈ ಕೆಲಸ ಮುಖ್ಯಮಂತ್ರಿಗಳಿಂದ ಆಗುತ್ತದೆ ಎನ್ನತಕ್ಕಂಥ ಆಸೆಯನ್ನು ನಾನು ಈ ಸಂದರ್ಭದಲ್ಲಿ ಇಟ್ಟುಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೇ, ನಮ್ಮ ಮಕ್ಕಳಿಗೆ ಸಂಬಂಧಪಟ್ಟಿರತಕ್ಕಂಥ ಒಂದು ವಿಚಾರನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರ ಈಗ ಈ ಅಕ್ಷರ ಕಾರ್ಯಕ್ರಮದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿ ಶಾಲಾ ಮಕ್ಕಳಿಗೆ ಹಾಲನ್ನು ಕೊಡತಕ್ಕಂಥ ಕೆಲಸವನ್ನು ಇವತ್ತು ಪ್ರಾರಂಭ ಮಾಡಿದೆ. ಆದರೆ ಒಂದನೇ ತರಗತಿಯ ಮಕ್ಕಳಿಗೆ ಮಾತ್ರ ಹಾಲನ್ನು ಕೊಡತಕ್ಕಂಥ ನೀತಿಯನ್ನು ಇವತ್ತು ಜಾರಿಗೆ ತಂದಿದ್ದಾರೆ. ಇದರಿಂದ ಏನು ಆಗಿದೆ ಅಂದರೆ, ಒಂದೇ ಶಾಲೆಯಲ್ಲಿ ಕುಳಿತು ಕೊಂಡಿರತಕ್ಕಂಥ ಮಕ್ಕಳು ಒಬ್ಬ ಮಗು ಹಾಲು ಕುಡಿಯುತ್ತಾ ಇದ್ದರೆ ಪಕ್ಕದಲ್ಲಿರತಕ್ಕಂಥ ಎರಡನೆಯ ತರಗತಿ ಮಗು ಅದನ್ನು ನೋಡಿ ಕಣ್ಣೀರು ಹಾಕತಕ್ಕಂಥ ಸಂದರ್ಭಸನ್ನಿವೇಶ ಕೂಡ ಬಂದಿದೆ. ಜೊಲ್ಲು ಸುರಿಸುತ್ತವೆ. ಈಗ ಒಂದು ಮನೆಯಲ್ಲಿ ಎರಡು ಮಕ್ಕಳು ಇದ್ದರೆ ಒಬ್ಬನಿಗೆ ಪೆಪ್ಪರ್‌ಮೆಂಟ್ ಕೊಟ್ಟು ಇನ್ನೊಬ್ಬನಿಗೆ ಪೆಪ್ಪರ್‌ಮೆಂಟ್ ಕೊಡದೇ ಹೋದರೆ ಆ ಇನ್ನೊಬ್ಬನಿಂದು ಮಗುವಿನ ಸ್ಥಿತಿ ಎಂತಹ ಚಿಂತಾಜನಕವಾಗಿರಬಹುದು ಅಂತ ಮಕ್ಕಳನ್ನು ಹೆತ್ತ ಪ್ರತಿಯೊಬ್ಬ ತಂದೆ ತಾಯಿಗಳಿಗೂ ಗೊತ್ತಿರುತ್ತದೆ. ಅಂದಾಗ ಒಂದನೇ ತರಗತಿಯ ಮಕ್ಕಳಿಗೆ ಹಾಲನ್ನು ಕೊಟ್ಟು ಇನ್ನು ಆ ಶಾಲೆಯಲ್ಲಿ ಉಳಿದಿರತಕ್ಕಂತಹ ಮಕ್ಕಳಿಗೆ ಹಾಲನ್ನು ಕೊಡದೇ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.